
ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ (ರಿ.), ಬೆಂಗಳೂರು – 560 023.

ದಿನಾಂಕ: 01-11-2026 ರಂದು ನಡೆದ

ಕರ್ನಾಟಕ ರಾಜ್ಯೋತ್ಸವ ದಿನಾಚರಣೆಯ

ಸಚಿತ್ರಗಳ ಪಕ್ಷಿ ನೋಟ









ದಿನಾಂಕ: ೦೧-೧೧-೨೦೨೬ ರಂದು ಸಂಘದ ಧ್ವಜ ಸ್ತಂಭದ ಬಳಿ ನಡೆದ ಕರ್ನಾಟಕ ರಾಜ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಪದಾಧಿಕಾರಿಗಳು ಹಾಗೂ ಹಿರಿಯ ಸದಸ್ಯರೊಡಗೂಡಿ ಶ್ರೀ ಭುವನೇಶ್ವರಿ ದೇವಿಗೆ ಪೂಜೆ ಸಲ್ಲಿಸಲಾಯಿತು.











ಶ್ರೀ ಭುವನೇಶ್ವರೀ ದೇವಿ ಭಾವ ಚಿತ್ರಕ್ಕೆ ಪೂಜೆ ಸಲ್ಲಿಸಿದ ನಂತರ ರಾಷ್ಟ್ರೀಯ ಗೀತೆ ವಂದೇ ಮಾತರಂ ಹಾಡಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡರವರು ಕನ್ನಡ ಧ್ವಜಾರೋಹಣವನ್ನು ನೆರವೇರಿಸಿದರು. ಜಯ ಭಾರತ ಜನನಿಯ ತನುಜಾತೆ ನಾಡ ಗೀತೆಯನ್ನು ಎಲ್ಲರೂ ಧ್ವನಿಗೂಡಿಸಿದರು. ತದ ನಂತರ ರಾಷ್ಟ್ರಗೀತೆಯನ್ನು ಹಾಡಲಾಯಿತು.









ಕಾರ್ಯಕ್ರಮದಲ್ಲಿ, ಸಂಘದ ಕಾರ್ಯದರ್ಶಿಯವರಾದ ಶ್ರೀ ಎಂ. ಶಂಕರಪ್ಪ ರವರು, ಆಗಮಿಸಿದ್ದ ಎಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಬೆಂಗಳೂರು ನಗರದಲ್ಲಿ ಶೇ.೪೨, ಇಡೀ ರಾಜ್ಯದಾದ್ಯಂತ ಶೇ ೬೪ ರಷ್ಟು ಕನ್ನಡಿಗರು ಇರುವುದನ್ನು ಕಾಣಬಹುದು. ಕನ್ನಡಿಗರ ಈ ಇಳಿಮುಖಕ್ಕೆ ವಲಸಿಗರ ಪ್ರಾಬಲ್ಯವೇ ಕಾರಣ. ವಿಶೇಷವಾಗಿ ಕನ್ನಡಿಗರ ನಿರ್ಲಕ್ಷತೆ, ನಿರಭಿಮಾನ ಕಾರಣವಾಗಿದ್ದು, ಕನ್ನಡದ ಬಗ್ಗೆ ಸ್ವಾಭಿಮಾನಿಗಳಾಗಿ, ಕನ್ನಡದಲ್ಲಿ ವ್ಯವಹರಿಸಿ, ಉಳಿಸಿ, ಬೆಳೆಸುವಂತೆ ಕರೆ ನೀಡಿದರು.







ಕಾರ್ಯಕ್ರಮದಲ್ಲಿ ಸಂಘದ ಸದಸ್ಯರಾದ ಶ್ರೀ ಎಮ್.ಎನ್. ಮಂಜೇಗೌಡ ರವರು ಕನ್ನಡ ಸಾಹಿತಿ/ಕವಿಯವರಾದ ಶ್ರೀ ನಿಸಾರ್ ಅಹಮದ್ ರವರ ರಚಿಸಿರುವ ಕನ್ನಡ ಗೀತೆಯನ್ನು ಹಾಡಿದರು..





ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರಾದ ಶ್ರೀ ವಿ. ಗೋವಿಂದಯ್ಯ ನವರು ಇಂದಿನ ಭಾಷಣದಲ್ಲಿ ಕನ್ನಡ ಭಾಷೆಯ ಬೆಳವಣಿಗೆ ಬಗ್ಗೆ ನುಡಿದು, ಹಳಗನ್ನಡ, ನಡುಗನ್ನಡ, ನವೀನ ಕನ್ನಡಗಳು. ಆದಿ ಕವಿ ಪಂಪನಿಂದ ಆಧುನಿಕ ಕವಿವರ್ಯರವರೆಗೆ ವಿಷದವಾಗಿ ವಿವರಿಸಿದರು. ಜ್ಞಾನಪೀಠ ಪ್ರಶಸ್ತಿಗಳಿಸಿದ ಎಲ್ಲರನ್ನೂ ಸ್ಮರಿಸಿದರು. ಎಲ್ಲರಿಗೂ ಕನ್ನಡ ಭಾಷಾ ಸಾಹಿತ್ಯದ ಸ್ನಾನ ಮಾಡಿಸಿದರು.







ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ಮತ್ತೊಬ್ಬ ಸದಸ್ಯರಾದ ಶ್ರೀ ಎನ್.ಸಿ. ಶಂಕರಯ್ಯ ರವರು ತಮ್ಮ ಭಾಷಣದಲ್ಲಿ ಕನ್ನಡ ಭಾಷೆ ಬಗ್ಗೆ ವಿಷದವಾಗಿ ಮಾತಾಡಿದರು. ಕನ್ನಡ ಶಾಸನಗಳ ಬಗ್ಗೆ ಸ್ಮರಿಸಿಕೊಂಡರು. ಭಾಷಾ ಬೆಳವಣಿಗೆ ಹಾಗೂ ಭಾಷಾ ಬಳಕೆ ಬಗ್ಗೆ ಮಕ್ಕಳಿಗೆ ತಿಳಿಸಿ, ಬೆಳೆಸಲು ತಿಳಿಸಿದರು.





ಕಾರ್ಯಕ್ರಮದ ಅಂತ್ಯದಲ್ಲಿ ಸಂಘದ ಖಜಾಂಚಿಯವರಾದ ಎ.ಆರ್. ಬಡಿಗೇರ್ ರವರು ಧ್ವಜಾರೋಹಣ ಮಾಡಿದ ಅಧ್ಯಕ್ಷರು, ಭಾಷಣ ಮಾಡಿದ ಸದಸ್ಯರು, ಆಗಮಿಸಿದ್ದ ಹಿರಿಯ/ಕಿರಿಯ ಸದಸ್ಯರುಗಳಿಗೂ ಧನ್ಯವಾದ ಸಲ್ಲಿಸಿದರು.



ಕಾರ್ಯಕ್ರಮವನ್ನು ಸಂಘದ ಜಂಟಿ ಕಾರ್ಯದರ್ಶಿಯವರಾದ ಶ್ರೀ ಡಿ.ಎಸ್. ಅಶೋಕ್ ಕುಮಾರ್ ರವರು ಅಚ್ಚುಕಟ್ಟಾಗಿ ನಿರೂಪಿಸಿದರು.



ಸಂಘದ ಅಧ್ಯಕ್ಷರಾದ ಶ್ರೀ ಕೆ.ಬಿ. ಬೆಟ್ಟೇಗೌಡ ರವರು ಕನ್ನಡ ಸಾಹಿತ್ಯದ ಬಗ್ಗೆ ವಿದೇಶಿಯವರಾದ ಬಿ.ಎಲ್. ರೈಸ್ ರವರ ಕನ್ನಡ ಪ್ರೇಮದ ಬಗ್ಗೆ ನುಡಿದು, ದೈನಂದಿನ ಜೀವನದಲ್ಲಿ ಕನ್ನಡ ಭಾಷೆಯನ್ನು ಬಳಸಿ, ಬೆಳೆಸಲು ಸಂಕ್ಷಿಪ್ತವಾಗಿ ತಮ್ಮ ಅಧ್ಯಕ್ಷೀಯ ಭಾಷಣದ ಮೂಲಕ ಕರೆ ನೀಡಿದರು.











ಕಾರ್ಯಕ್ರಮಕ್ಕೆ ಆಗಮಿಸಿದ್ದ ಹಿರಿಯ/ಕಿರಿಯ ಸದಸ್ಯರು ಹಾಗೂ ಇತರರ ಫೋಟೋಗಳು.







ಕಾರ್ಯಕ್ರಮಕ್ಕೆ ಆಮಿಸಿದ್ದ ಎಲ್ಲರಿಗೂ ಬೆಳಗಿನ ಉಪಹಾರವನ್ನು ಏರ್ಪಡಿಸಲಾಗಿತ್ತು.





























ಸಭಾ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ವ್ಯವಸ್ಥೆ ಮಾಡಲಾಗಿದ್ದ ಉಪಹಾರದೊಂದಿಗೆ ಕಾರ್ಯಕ್ರಮ ಸಂಪನ್ನ ವಾಗಿರುತ್ತದೆ.

ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ
ಕ್ಷೇಮಾಭಿವೃದ್ಧಿ ಸಂಘ, ಬೆಂಗಳೂರು – 560 023.

* * * * *